ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ-೧೫೫<br>Volume-155 | (ಬೆಂಗಳೂರು, ಗುರುವಾರ, ೦೯ ಜನವರಿ,2020 (ಪುಷ್ಯ ೧೯, ಶಕವರ್ಷ ೧೯೪೧)<br>(Bengaluru,THURSDAY,09, JANUARY,2020 ( Pushya 19, ShakaVarsha 1941) | ಸಂಚಿಕೆ-೦೨<br>Issue -02 |
|---|---|---|

## ಭಾಗ ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** :- ದಿ ಬೆಂಗಾಲಿ ಅಸೋಸಿಯೇಷನ್, ಬೆಂಗಳೂರು ಈ ಸಂಘದ ಆಡಳಿತಾಧಿಕಾರಿಯನ್ನು ಬದಲಾಯಿಸುವ ಬಗ್ಗೆ

***ಸರ್ಕಾರದ ಆದೇಶ ಸಂಖ್ಯೆ: ಸಇ 72 ಸಸಂನೋ 2016 ಬೆಂಗಳೂರು, ದಿನಾಂಕ:13.12.2019***

**ಓದಲಾಗಿದೆ:-** 1) ಸರ್ಕಾರದ ಆದೇಶ ಸಂಖ್ಯೆ: 72 ಸಸಂನೋ 2016 ಬೆಂಗಳೂರು, ದಿನಾಂಕ: 09.08.2019

2) ಶ್ರೀ ಅಧೀಪ್ ಚೌಧರಿ ಮತ್ತು ಇತರರು, ದಿ ಬೆಂಗಾಲಿ ಅಸೋಸಿಯೇಷನ್ ಇವರ ಪತ್ರ ದಿನಾಂಕ:13.11.2019

*****

**ಪ್ರಸ್ತಾವನೆ:**

ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿ ಬೆಂಗಾಲಿ ಅಸೋಸಿಯೇಷನ್, 1-ಎ, ಅಸಾಯಿ ರಸ್ತೆ, ಶಿವನ್ ಚೆಟ್ಟಿ ಗಾರ್ಡ್‌ನ್, ಬೆಂಗಳೂರು-560042 ಈ ಸಂಘಕ್ಕೆ ಡಾ||ಅಶ್ವತ್, ಐ.ಎ.ಎಸ್. (ನಿವೃತ್ತ), ನಂ.2, 60 ಅಡಿ ರಸ್ತೆ, ಸಿಟಿ ವಿನಾಯಕ ಲೇಔಟ್, ಸಂಜಯನಗರ, ಬೆಂಗಳೂರು-560094 ಇವರನ್ನು ಈ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುವಂತೆ ಮುಂದಿನ ಆರು ತಿಂಗಳ ಅವಧಿಗೆ ಅಥವಾ ಆಡಳಿತ ಮಂಡಳಿಗೆ ಹೊಸದಾಗಿ ಚುನಾವಣೆ ನಡೆಸಿ, ಹೊಸ ಆಡಳಿತ ಮಂಡಳಿಗೆ ಅಧಿಕಾರ ವಹಿಸಿಕೊಡುವವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಅಧೀಪ್ ಚೌಧರಿ ಮತ್ತು ಇತರರು, ಡಾ.ಅಶ್ವತ್ ಡಿ.ಎಸ್., ನಿವೃತ್ತ ಐ.ಎ.ಎಸ್. ಇವರು ದಿ ಬೆಂಗಾಲಿ ಅಸೋಸಿಯೇಷನ್‌ನ ಆಡಳಿತಾಧಿಕಾರಿಯ ಪ್ರಭಾರವನ್ನು ವಹಿಸಿಕೊಂಡ ತಕ್ಷಣ ಒಬ್ಬ ಕಾರ್ಯದರ್ಶಿ ಮತ್ತು ಅಕೌಂಟ್ಸ್

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಆಫೀಸರ್‌ರವನ್ನು ನೇಮಕಮಾಡಿಕೊಂಡಿರುತ್ತಾರೆಂದು ಹಾಗೂ ಸರ್ವಾಧಿಕಾರಿಯಂತೆ ವರ್ತಿಸುತ್ತಿರುತ್ತಾರೆಂದು ಇದು ಸಂಘಕ್ಕೆ ಅಪಾಯಕಾರಿ ಹಾಗೂ ಅನಾರೋಗ್ಯಕರ ಬೆಳವಣಿಗೆಯಾಗಿರುತ್ತದೆಂದು ತಿಳಿಸಿದ್ದು, ಸದರಿಯವರು ಅಧಿಕಾರ ವಹಿಸಿಕೊಂಡ ಒಂದೇ ತಿಂಗಳಲ್ಲಿ ಅನುಪಯುಕ್ತವಾದ ವಸ್ತುಗಳಿಗೆ ಖರ್ಚು ಮಾಡಿರುತ್ತಾರೆ ಹಾಗೂ 2019 ರ ದುರ್ಗ ಪೂಜಾ ವೆಚ್ಚವಾಗಿ ರೂ.25 ಲಕ್ಷಗಳನ್ನು ಖರ್ಚು ಮಾಡಿರುತ್ತಾರೆಂದು, ಸದರಿ ಆಡಳಿತಾಧಿಕಾರಿಯವರು ಮುಂದುವರೆದರೆ ಬೆಂಗಾಲಿ ಅಸೋಸಿಯೇಷನ್ ಸಂಘವು ದಿವಾಳಿಯಾಗುತ್ತದೆಂದು ಆತಂಕ ವ್ಯಕ್ತಪಡಿಸಿರುತ್ತಾರೆ ಹಾಗೂ ನೇಮಕ ಮಾಡಿಕೊಂಡಿರುವ ಕಾರ್ಯದರ್ಶಿಯವರಿಗೆ ಅಧಿಕಾರವಿಲ್ಲದಿದ್ದರೂ ಚೆಕ್ಕುಗಳಿಗೆ ಸಹಿ ಮಾಡಲು ಕೂಡಾ ಆದೇಶಿರುತ್ತಾರೆಂದು ತಿಳಿಸಿರುತ್ತಾರೆ. ಆದುದರಿಂದ ಈಗಿರುವ ಆಡಳಿತಾಧಿಕಾರಿಯನ್ನು ಬದಲಿಸಿ ಸಂಘದ ನ್ಯೂನ್ಯತೆಗಳನ್ನು ಸರಿಪಡಿಸಿ ಸಂಘದ ಬೆಳವಣಿಗೆಯನ್ನು ಮಾಡಬಲ್ಲ ಬೇರೆ ಸಮಂಜಸವಾದ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ದೂರು ಅರ್ಜಿಯಲ್ಲಿನ ಅಂಶಗಳನ್ನು ಸರ್ಕಾರವು ಪರಿಶೀಲಿಸಿ, ದಿ ಬೆಂಗಾಲಿ ಅಸೋಸಿಯೇಷನ್, 1-ಎ, ಅಸಾಯಿ ರಸ್ತೆ, ಶಿವನ್ ಚೆಟ್ಟಿ ಗಾರ್ಡ್‌ನ್, ಬೆಂಗಳೂರು-560042 ಈ ಸಂಘಕ್ಕೆ ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದ ಡಾ. ಅಶ್ವತ್ ಡಿ.ಎಸ್., ನಿವೃತ್ತ ಐ.ಎ.ಎಸ್. ಅಧಿಕಾರಿ, ನಂ.2, 60 ಅಡಿ ರಸ್ತೆ, ಸಿಟಿ ವಿನಾಯಕ ಲೇಔಟ್, ಸಂಜಯನಗರ, ಬೆಂಗಳೂರು-560094 ಇವರ ಬದಲಾಗಿ ಶ್ರೀ ಸಿ.ಪ್ರಸಾದ್ ರೆಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 52 ಇವರನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ಪ್ರಕಾರ ಆಡಳಿತಾಧಿಕಾರಿಯನ್ನಾಗಿ ನೇಮಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**-: ಆದೇಶ :-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27-ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿ ಬೆಂಗಾಲಿ ಅಸೋಸಿಯೇಷನ್, 1-ಎ, ಅಸಾಯಿ ರಸ್ತೆ, ಶಿವನ್ ಚೆಟ್ಟಿ ಗಾರ್ಡ್‌ನ್, ಬೆಂಗಳೂರು-560042 ಈ ಸಂಘಕ್ಕೆ ಸರ್ಕಾರದ ಆದೇಶ ಸಂ. ಸಇ 72 ಸಸಂನೋ 2106, ದಿನಾಂಕ:09.08.2019 ರಲ್ಲಿ ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದ ಡಾ||ಅಶ್ವತ್, ಐ.ಎ.ಎಸ್. (ನಿವೃತ್ತ) ನಂ.2, 60 ಅಡಿ ರಸ್ತೆ, ಸಿಟಿ ವಿನಾಯಕ ಲೇಔಟ್, ಸಂಜಯನಗರ, ಬೆಂಗಳೂರು-560094 ಇವರನ್ನು ಬದಲಾಯಿಸಿ ಶ್ರೀ ಸಿ.ಪ್ರಸಾದ್ ರೆಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 52 ಇವರನ್ನು ಆಡಳಿತಾಧಿಕಾರಿಯಾಗಿ ನೇಮಿಸಿ ಆದೇಶಿಸಿದೆ. ಸದರಿ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಸ್ಥೆಯಲ್ಲಿನ ಲೋಪದೋಷಗಳನ್ನು ನಿಯಮಾನುಸಾರ ಸರಿಪಡಿಸಿ ಹಾಗೂ ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ನೂತನ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ ಸರ್ಕಾರಕ್ಕೆ ವರದಿ ನೀಡಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮನೋರಮ ಡಿ.ಸಿ.)**
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-01

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೯.

SUNIL GARDE Digitally signed by SUNIL GARDE
Date: 2020.01.10 03:35:30 +05'30'